ಹೇಳುತ್ತೀರಿ, ಆ ಪ್ರಕಾರ consumers from their nose they have to shell out ಆರು ತಿಂಗಳು ಇದ್ದರೂ ಕೊಡಬೇಕಾಗುತ್ತದೆ. ಇದು ಸರಿಯಲ್ಲ, ಇವತ್ತು ಕೇಂದ್ರ ಸರ್ಕಾರದ ಹೊಸ ನೀತಿ ಏನಿದೆ ಆ ಪ್ರಕಾರ ಪ್ರೈವೇಟ್ ಸೆಕ್ಟಾರ್ ಬಂದನಂತರ ತಮಗೆ ಗೊತ್ತಾಗುತ್ತದೆ. ನಾನು ಏನನ್ನು ಹೇಳುತ್ತಿದ್ದೇನೆ ಎಂದರೆ ಬಹಳ ಗ್ರಾಹಕರು ಈಗ ಕಷ್ಟದಲ್ಲಿದ್ದಾರೆ, ಗ್ರಾಹಕರಿಂದ ಮೂರು ತಿಂಗಳ ಡಿಪಾಸಿಟ್ ಅನ್ನು ಏತಕ್ಕೆ ತೆಗೆದುಕೊಳ್ಳಬೇಕು, ಇದಕ್ಕೆ ಕಾರಣವೇನು? you will charge 10% ಒಂದು ತಿಂಗಳ ಬಿಲ್ ಕಟ್ಟಲಿಲ್ಲ ಎಂದರೆ ವಿದ್ಯುತ್ತನ್ನು ಕಟ್ ಮಾಡಿಬಿಡುತ್ತೀರಿ; Then you charge 24% ಹೀಗೆ ನೀವು ಎಲ್ಲಾ ರೀತಿಯಲ್ಲೂ ತಮ್ಮ ಕಂಟ್ರೋಲ್ ಅನ್ನು ಗ್ರಾಹಕರ ಮೇಲೆ ಇಟ್ಟುಕೊಂಡು ಮನಾಪಲಿ ಇದೆ ಎಂದು ಯಾವ ಮಟ್ಟಕ್ಕೆ ಬೇಕಾದರೂ ತೆಗೆದುಕೊಂಡು ಹೋಗುವುದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ. ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಇವತ್ತು ಕ್ಯಾಷ್ ಸೆಕ್ಯುರಿಟಿ ಬಹಳ ಕಷ್ಟವಾಗಿದೆ. ಇದರಿಂದ ನಿಮಗೆ ತೊಂದರೆಯಾಗುತ್ತದೆ. Whether it is industries or consumers. Today KEB is facing financial crisis. ಹಾಗಾಗಿ ನಿಮ್ಮ ಬರ್ಡನ್ ನಮ್ಮ ಮೇಲೆ ಬೀಳುತ್ತಿದೆ. ನಿಮ್ಮ ಆರ್ಥಿಕ ಪರಿಸ್ಥಿತಿ ಸರಿ ಇದ್ದರೆ you would not have shifted this burden. ಆದರೆ ಇವತ್ತು ನಿಮ್ಮ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ, For your lethagy, you are trying to shift the burden on the consumers, for no fault of them. ಒಂದು ತಿಂಗಳು ಬಿಲ್ ಕಟ್ಟದಿದ್ದರೂ ಪೆನಾಲ್ಟಿಯನ್ನು ಹಾಕುತ್ತೀರಿ, ಡಿಸ್‌ಕನೆಕ್ಟ್ ಮಾಡುತ್ತೀರಿ. ಮಹಾರಾಷ್ಟ್ರದಲ್ಲಿ ಯಾವ ಪ್ರಕಾರ ಇದೆ, ತಮಿಳುನಾಡಿನಲ್ಲಿ ಯಾವ ಪ್ರಕಾರ ಇದೆ, ಆ ಪ್ರಕಾರ ಮಾಡಿ, ಒಂದು ತಿಂಗಳ ಡಿಫಾಸಿಟ್ ಇಡುವುದು ಮ್ಯಾಕ್ಸಿಮಮ್ ಇದು ಹಳೆಯ ಪದ್ಧತಿ, ಒಂದು ತಿಂಗಳ ಡಿಫಾಸಿಟನ್ನು ಬ್ಯಾಂಕ್ ಗ್ಯಾರಂಟಿ ಎಂದು ತೆಗೆದುಕೊಳುತ್ತಿದ್ದೀರಿ, ಆ ಪ್ರಕಾರ ನೀವು ಮಾಡಲಿಕ್ಕೆ ಸಾಧ್ಯ ಇದೆ. ಇದನ್ನು ತಾವು ಟ್ಯಾರಿಫ್ ಬಗ್ಗೆ ಹೇಳಿದ್ದೀರಿ, ಟ್ಯಾರಿಫ್ ಬದಲಾವಣೆಯಾದಾಗ ಡಿಪಾಸಿಟ್ ಹೆಚ್ಚುಕಡಿಮೆಯಾಗುತ್ತದೆ, ಐದು ವರ್ಷಕೊಮ್ಮೆ ಇದನ್ನು ಮಾಡುತ್ತಿದ್ದೀರಿ, I welcome it. ಮತ್ತೊಂದು ಏನಾಗಿದೆ ಎಂದರೆ ಜನವರಿಯಿಂದ ಅಕ್ಟೋಬರ್‌ವರೆಗೆ ನೀವು ಅವರೇಜ್ ನೋಡುತ್ತಿಲ್ಲ, ಆವರೇಜ್‌ನ್ನು ತಾವು ನೋಡಬೇಕು. ಯಾವ ತಿಂಗಳು ಹೈಯಸ್ಟ್ ಇದೆ you multiply it by three. What is this? Because you have got a pen and ink, in taking average? Whatever is advantageous to you, you are doing. Atleast from january to October, you can take average and do it. ಅದನ್ನು ತಾವು ಮಾಡುತ್ತಿಲ್ಲ. ಜನವರಿಯಿಂದ ಅಕ್ಟೋಬರ್‌ವರೆಗೆ ತಮ್ಮ ಅವರೇಜ್ ಏನು ಬರುತ್ತದೆ, ಆ ಅವರೇಜ್‌ನಿಂದ ತಾವು ತೆಗೆದುಕೊಳ್ಳಿ, ಎರಡನೆಯದು ಮೂರು ತಿಂಗಳ ಡಿಫಾಸಿಟ್ ಬಹಳ ಗ್ರಾಹಕರಿಗ ಜಾಸ್ತಿಯಾಗುತ್ತದೆ, ಈಗಾಗಲೇ ಬೆಲೆ ಏರಿಕೆಯಿಂದ ಸಾಕಷ್ಟು ಗ್ರಾಹಕರು ತೊಂದರೆಯಲ್ಲಿದ್ದಾರೆ, ಇಂಡಸ್ಟ್ರೀಯವರು ಬಹಳ ತೊಂದರೆಯಲ್ಲಿದ್ದಾರೆ. ಹಾಗಾಗಿ ಆ ಅವಧಿಯನ್ನು ಮೂರು ತಿಂಗಳಿಂದ ಒಂದು ತಿಂಗಳಿಗೆ ಇಳಿಸಬೇಕೆಂದು ನಾನು ತಮ್ಮಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಆಂಧ್ರಪ್ರದೇಶದಲ್ಲಿರುವ ಪದ್ಧತಿಯನ್ನು ನಾನು ಅನುಕರಣೆ ಮಾಡುತ್ತಿದ್ದೇವೆ. ನೀವು ತಮಿಳುನಾಡು ಮತ್ತು ಮಹಾರಾಷ್ಟ್ರದ ಬಗ್ಗೆ ಮಾಡಬೇಕೆಂದು ಹೇಳುತ್ತಿದ್ದೀರಿ, But one thing I concede. ಆವರೇಜ್ ತೆಗೆದುಕೊಳ್ಳಿ ಎಂದು ತಾವು ಏನು ಸೂಚನೆಯನ್ನು ಮಾಡಿದ್ದೀರಿ, ಆ ಆವರೇಜ್ ತೆಗೆದುಕೊಂಡು ಸದ್ಯಕ್ಕೆ ಮೂರು ತಿಂಗಳನ್ನೇ ಉಳಿಸಿಕೊಳ್ಳೋಣವೆಂದು ವಿಚಾರ ಮಾಡುತ್ತಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ವರಾಹಿ ಪ್ರಾಜೆಕ್ಟ್ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಲ್ಲ, ಹೇಳಬೇಕು.

ಶ್ರೀ ಎಸ್. ಎಂ. ಕೃಷ್ಣ : ವರಾಹಿಯೋಜನೆಯ ಬಗ್ಗೆ ಸಮಿತಿ ಒಂದು ವರದಿಯನ್ನು ಸದನಕ್ಕೆ ಸಲ್ಲಿಸಿದೆ. ಕೆಲವು ಗುರುತರವಾದಂತಹ ಅಪಾದನೆಗಳನ್ನು, ವರಾಹಿ ಯೋಜನೆಯ ಬಗ್ಗೆ ಮಾಡಿದೆ. ಸರ್ಕಾರದವರು ಅತ್ಯಂತ ಆದ್ಯತು ಮೇಲೆ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಸಮಿತಿಯವರೇ ನಮಗೆ 6 ತಿಂಗಳು ಕಾಲಾವಕಾಶವನ್ನು ಕೊಟ್ಟಿದ್ದಾರೆ, ಆದ್ದರಿಂದ ಆ ಕಾಲಾವಕಾಶದೊಳಗೆ ನಾವು ಅದರ ಬಗ್ಗೆ ಸೂಕ್ತ ವಿಚಾರಣೆಯನ್ನು ಮಾಡಿ ಅದರ ಜವಾಬ್ದಾರಿ ಯಾರ ಮೇಲಿದೆ ಅನ್ನತಕ್ಕಂಥದ್ದನ್ನು ನಾವು ಗುರ್ತಿಸುವುದಕ್ಕೆ ಕಾರ್ಯಾರಂಭ ಮಾಡುತ್ತೇವೆ. ಎರಡನೆಯದು ಸೇಫ್ಟಿಯ ಬಗ್ಗೆ ಕೆಲವು ಅನುಮಾನಸ್ಪದವಾದಂತಹ ಹೇಳಿಕೆಗಳು, ಸಮಿತಿಯ ವರದಿಯಲ್ಲಿ ಅಡಕವಾಗಿದ. ಆದರೆ ನಾನು ನಮ್ಮ ಇಲಾಖೆಯವರನ್ನು ವಿಚಾರಣೆ ಮಾಡಿದಾಗ ಆ ಸೇಫ್ಟಿಯ ವಿಚಾರದಲ್ಲಿ ಯಾವುದೇ ಅನುಮಾನ ಇಲ್ಲ ಎನ್ನತಕ್ಕಂಥ ಆಶ್ವಾಸನೆಯನ್ನು ಅವರು ನನಗೆ ಕೊಟ್ಟಿದ್ದಾರೆ. ಮತ್ತು ಇನ್ನು ನಮಗೆ ಅನುಮಾನ ಬಂದರೆ, ನಾವು ಪರಿಣಿತರ ಮೂಲಕ ಅದರ ಸೇಫ್ಟಿಯ ಬಗ್ಗೆ ವಿಚಾರಣೆಯನ್ನು ಮಾಡಿಸುತ್ತೇನೆ.

ಶ್ರೀ ಜಿ. ಸಿ. ಮಾಧುಸ್ವಾಮಿ : ಇರಿಗೇಷನ್ ಪಂಪ್‌ಸೆಟ್ಟಿನ ಬಾಕಿ ಏನಿತ್ತು, ಅದಕ್ಕೆ ಏನಾದರೂ ಬಡ್ಡಿಯನ್ನು ವೇವ್ ಮಾಡಿಬಿಟ್ಟು ರೈತರಿಗೆ 1-2 ತಿಂಗಳು ಕಾಲಾವಕಾಶವನ್ನು ಕೊಟ್ಟು ಬಾಕಿಯನ್ನು ಕಟ್ಟಿಸಿಕೊಳ್ಳುವುದಕ್ಕೆ ಅವಕಾಶವನ್ನು ಕೊಡುತ್ತೀರಾ ಎಂದು ಕೇಳಿದ್ದೆವು; ಅದೊಂದು ಹೇಳಿಕೆಯನ್ನು ತಾವು ಕೊಡಬೇಕು. ಬಡ್ಡಿ ಕಟ್ಟಿ ಅಂದರ ಬಹಳ ಜಾಸ್ತಿಯಾಗುತ್ತದೆ. ಬಡ್ಡಿ ವೇವ್ ಮಾಡಿ, ಹಿಂದಿನದ್ದನ್ನು ಕಟ್ಟಲಿಕ್ಕೆ ಏನಾದರೂ ಅವಕಾಶವನ್ನು ಮಾಡಿಕೊಡುತ್ತೀರಾ?

ಶ್ರೀ, ಬಿ. ಹೆಚ್. ಬನ್ನಿಕೋಡ್ : ಹಿಂದಿನ ಸಾರಿ ಈ ಸದನಕ್ಕೂ ತಮ್ಮ ಸರ್ಕಾರ ರೈತರ ಪಂಪ್‌ಸೆಟ್ಟಿನ ವಿದ್ಯುತ್ ಬಾಕಿಯ ಬಡ್ಡಿಯನ್ನು ವಜಾ ಮಾಡುತ್ತೇವೆ, ಮನ್ನಾ ಮಾಡುತ್ತೇವೆ. ಅಸಲನ್ನು ಮಾತ್ರ ಕಟ್ಟಿದರೆ ಸಾಕೆಂದು ಹೇಳಿತ್ತು; ಆದರೆ ಅದು ಇವತ್ತಿಗೂ ಕಾರ್ಯರೂಪಕ್ಕೆ ಬಂದಿಲ್ಲ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಈ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದರು. ಬಡ್ಡಿಯನ್ನು ಮನ್ನಾ ಮಾಡುತ್ತೇವೆ, ಅಸಲನ್ನು ಮಾತ್ರ ಕಟ್ಟಿದರೆ

ಸಾಕು ಎಂದು ಹೇಳಿದ್ದರು. ಆದರೆ ಇವತ್ತಿನವರೆಗೂ ಅದು ಜಾರಿಗೆ ಬಂದಿಲ್ಲ, ಆದ್ದರಿಂದ ದಯವಿಟ್ಟು ಬಡ್ಡಿ ಮನ್ನಾ ಮಾಡಬೇಕು, ಮತ್ತು ಅಸಲನ್ನು ಮಾತ್ರ ವಸೂಲು ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಸಿ. ಭೈರೇಗೌಡ : ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ಮತ್ತೊಂದು ವಿವಾದ ತರತಕ್ಕಂಥದ್ದು ಏನೆಂದರೆ ಈ ವಿಚಾರವನ್ನು ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಹಿಂದೆ ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಿತ್ತು. ಈ ಸದನದಲ್ಲಿಯೂ ಕೂಡ, ಅದಕ್ಕೆ ಒಂದು ಆಶ್ವಾಸನೆ ಬಂದಿತ್ತು. ಆದರೆ ಇದು ಸರ್ಕಾರಿ ಆಜ್ಞೆಯಾಗಿ ಮಂಡಲಿಗೆ ಹೋಗಲಿಲ್ಲ ; ಇದು ಪತ್ರಿಕೆಯಲ್ಲಿ ಬಂತೇ ವಿನಹ ಅದು ಕಾರ್ಯಗತವಾಗಲಿಲ್ಲ. ಯಾರೂ ಕೂಡ ಹಣವನ್ನು ಕಟ್ಟಲಿಲ್ಲ ; ಏಕೆಂದರೆ ಪತ್ರಿಕೆಯಲ್ಲಿ ಬಡ್ಡಿ ಮತ್ತು ಸುಸ್ತಿ ಬಡ್ಡಿ ಆಗುತ್ತದೆ ಅನ್ನುವ ಕಾರಣದಿಂದ, ಅವರು ವಜ ಆದ ಮೇಲೆ ಹಣವನ್ನು ಕಟ್ಟೋಣ ಎನ್ನತಕ್ಕ ಕಾರಣದಿಂದ ಅವರು ಸುಮ್ಮನೆ ಇದ್ದರು. ಇವತ್ತು ನೀವು 10 ಹೆ.ಪಿ.ಯವರೆಗೂ ಉಚಿತವಾಗಿ ಕೊಡುತ್ತಿದ್ದೀರಿ, ಅದನ್ನು ಕೂಡ ರೈತರು ಉಪಯೋಗಿಸತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ಇದಕ್ಕೆ ಕಾರಣ ಏನು ಅಂದರೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇವೆನ್ನತಕ್ಕ ಆಶ್ವಾಸನೆ ಸರ್ಕಾರಿಂದ ಬಂದಿದ್ದರಿಂದ ; ಆದ್ದರಿಂದ ಇದರ ಬಗ್ಗೆ ಕಳೆದ ಸಾರಿ ಪ್ರಸ್ತಾಪ ಮಾಡಿದಾಗ, ಈ ಬಗ್ಗೆ ಸರ್ಕಾರ ಆಜ್ಞೆಯಾಗಬೇಕಾಗಿದೆ ಎನ್ನತಕ್ಕ ಪುಟುಕು ಉತ್ತರವನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ತಾವು ತೀವ್ರವಾದಂತಹ ಪರಿಶೀಲನೆಯನ್ನು ಮಾಡಬೇಕು. ನನ್ನ ಅಂದಾಜಿನ ಪ್ರಕಾರ ಸುಮಾರು 100 ಕೋಟಿ ರೂಪಾಯಿ ಐ.ಪಿ.ಸೆಟ್ ಕಡೆಯಿಂದ ಬಾಕಿ ಬರಲೇಬೇಕೆಂದು ಇದೆ. ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಿದರೆ ಅಷ್ಟು ಹಣ ನಿಮ್ಮ ಮಂಡಲಿಗೆ ಬರುತ್ತದೆ, ನಿಮಗೆ ಹಣ ಸಿಗುತ್ತದೆ, ನೀವು ಕೊಡತಕ್ಕಂಥದ್ದರಲ್ಲಿ 10-15 ಕೋಟಿರ ರೂಪಾಯಿ ಕಡಿಮೆಯಾಗಬಹುದು. ಆದರೆ ಅದರಿಂದ ನಿಮಗೆ 100 ಕೋಟಿ ರೂಪಾಯಿಯ ಮೇಲೆ ಹಣ ಸಿಗುತ್ತದೆ. ನಿಮ್ಮ ಮಂಡಳಿಗೆ ಹೆಚ್ಚಿಗೆ ಹಣ ಸಿಕ್ಕುವ ಕಾರಣದಿಂದ ನೀವು ದಯವಿಟ್ಟು ಈ ನಮ್ಮ ಸೂಚನೆಯನ್ನು ಒಪ್ಪಿಕೊಂಡು ಅದರ ಬಗ್ಗೆ ತಕ್ಷಣ ಸರ್ಕಾರಿ ಆಜ್ಞೆಯನ್ನು ಹೊರಡಿಸಿದರೆ ನಿಮ್ಮ ಮಂಡಲಿಯ ಹಣಕಾಸಿನ ಪರಿಸ್ಥಿತಿ ಸುಧಾರಣೆಗೊಂಡು ಹೆಚ್ಚಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಆದ ಕಾರಣ ದಯವಿಟ್ಟು ಇದನ್ನು ತೀವ್ರವಾಗಿ ತಾವು ಪರಿಶೀಲಿಸಿ ನೋಡಿ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಸದಸ್ಯರು ಬಾಕಿಯ ಬಗ್ಗೆ ಏನು ಸೂಚನೆಯನ್ನು ಕೊಟ್ಟಿದ್ದಾರೆ, ಇದರ ಬಗ್ಗೆಯೂ ನಾನು ಸದನದ ಸಮಿತಿಯವರ ಜೊತೆಯಲ್ಲಿ ಸೋಮವಾರ ಪರ್ಯಾಲೋಚನೆ ಮಾಡಿ ಆನಂತರ ರೈತರ ಪರವಾದಂತಹ ತೀರ್ಮಾನವನ್ನು ತೆಗೆದುಕೊಳ್ಳೋಣ.

<u>ಶಾಸನ ರಚನಾ ಕಾರ್ಯಕಲಾಪಗಳು</u>

ರೇಣುಕ ಎಲ್ಲಮ್ಮ ದೇವಸ್ಥಾನದ (ಆಡಳಿತ) (ತಿದ್ದುಪಡಿ) ವಿಧೇಯಕ 1993

<u>(ಪರ್ಯಾಲೋಚನ ಪ್ರಸ್ತಾವ)</u>

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) : ಅಧ್ಯಕ್ಷರೇ, ರೇಣುಕ ಎಲ್ಲಮ್ಮ ದೇವಸ್ಥಾನ (ಆಡಳಿತ) (ತಿದ್ದುಪಡಿ) ವಿಧೇಯಕ 1993ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

(ಪ್ರಸ್ತಾಪ ಮಂಡಿಸಲ್ಪಟ್ಟಿತು)

ಶ್ರೀ ಎಂ. ರಾಜಶೇಖರಮೂರ್ತಿ : ಮಾನ್ಯ ಅಧ್ಯಕ್ಷರೇ, ರೇಣುಕ ಎಲ್ಲಮ್ಮ ದೇವಸ್ಥಾನ ಅಡ್ಮಿನಿಸ್ಟ್ರೇಷನ್ ಆಕ್ಟ್ ಎನ್ನುವುದು 1974ರಲ್ಲಿ ಜಾರಿ ಆಯಿತು. ಅದಕ್ಕೆ 1975ರಲ್ಲಿ ರೂಲ್ಸ್ ಫ್ರೇಮ್ ಮಾಡಿದರು. ಆಕ್ಟ್‌ನಲ್ಲಿ ಏಪ್ರಿಲ್ 1ರಿಂದ ಮಾರ್ಚ್ 31ರವರೆಗೆ ಅಫಿಷಿಯಲ್ ಇಯರ್ ರೂಲ್ಸ್‌ನಲ್ಲಿ ಫಾರಮ್ ಎಲ್ಲಾ ಸೇರಿ ಎಕ್ಸ್‌ಪೆಂಡೀಚರ್ - ಇನ್‌ಕಮ್ ಸ್ಟೇಟ್‌ಮೆಂಟ್ ಕೊಡುವಾಗ ಅದನ್ನು ಏಪ್ರಿಲ್ 1ರಿಂದ ಮಾರ್ಚ್ 31ರವರೆಗೆ ಎಂದು ಹೇಳಿದ್ದಾರೆ. ಇವೆರಡು ಒಂದೇ ಕಾಲದಲ್ಲಿ ಎನ್ನುವ ದೃಷ್ಟಿಯಿಂದ ಅಫಿಶಿಯಲ್‌ಯರ್‌ನ್ನು ಆಕ್ಟನಲ್ಲಿ ಏಪ್ರಿಲ್ ಒಂದರಿಂದ ಮಾರ್ಚ್ ಮೂವತ್ತೊಂದರವರೆಗೆ ಮಾಡಬೇಕೆಂದು ಇದೆ. ಇದು ಬಹಳ ಸಿಂಪಲ್ ಅಮೆಂಡ್‌ಮೆಂಟ್ ಇರುವ ಕಾರಣ ಇದರ ಬಗ್ಗೆ ಚರ್ಚೆ ಏನೂ ಬೇಕಾಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆ ಮಾಡುವುದು ಏನು ಹೆಚ್ಚಲ್ಲ, ಅದು ಬರಿ ಇಯರ್ ಚೆಂಜ್ ಮಾಡುತ್ತಿರುವುದು. ಈ ಬಿಲ್ ಪಾಸ್ ಆಗುವುದಾದರೆ ನಮ್ಮ ಅಡ್ಡಿ ಏನೂ ಇಲ್ಲ. ಆದರೆ ಈ ಎಲ್ಲಮ್ಮ ಗುಡಿಗೆ ತಾವು ಹೋಗಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ; ನಾವು ಹೋಗಿದ್ದೇವೆ, ತಾವು ಹೋಗಿ ಆಶೀರ್ವಾದ ತೆಗೆದುಕೊಂಡು ಬರಬೇಕು. ಅಲ್ಲಿ ಭಕ್ತಾಧಿಗಳಿಗೆ ಇನ್ನೂ ಸಾಕಷ್ಟು ಸರಿಯಾದ ವ್ಯವಸ್ಥೆಯಾಗಬೇಕು. ಸ್ಯಾನಿಟೇಷನ್ ದೃಷ್ಟಿಯಿಂದ ಏಕೆಂದರೆ ಅದು ನಿಮ್ಮ ಕಂಟ್ರೋಲ್‌ನಲ್ಲಿ ಇದೆ. ಬೋರ್ಡ್ ಆಫ್ ಟ್ರಸ್ಟಿಗಳು ಇಲ್ಲಿ ಬರುತ್ತಾರೆ . ನಮ್ಮ ಕಾಲದಲ್ಲಿ ಇದನ್ನು ನಾವು ಮಾಡಿದೆವು. ಆದುದರಿಂದ ನೀವು ಮಾಡಿದ್ದು ಎಂದು ಹೇಳುತ್ತಿಲ್ಲ. ನಾವು ಏನು ಮಾಡಿದೆವು ಅಂದರೆ ನಮಗೆ ಯಾರು ಬೇಕು ಅವರನ್ನು ಅಲ್ಲಿ ಹಾಕುತ್ತಿದ್ದೆವು. ಆದರೆ ಅಲ್ಲಿ ಸುವ್ಯವಸ್ಥೆ ಇಲ್ಲ. ಆದುದರಿಂದ ಬೋರ್ಡ್‌ಗೆ ನಾಮಿನೇಷನ್ ಮಾಡುವಾಗ ಇದರ ಬಗ್ಗೆ ಚಿಂತನೆ ಇರುವ ಕಾಳಜಿ ಇರುವ ಜನರನ್ನು ಹಾಕಿ. ಮತ್ತು ಆ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳಿಗೆ ಸೌಲಭ್ಯ ಕೊಡಬೇಕು. ಅಲ್ಲಿ ಸಾಕಷ್ಟು ಹಣ ಇದೆ. ಆದುದರಿಂದ ಸರಿಯಾದ ಸೌಲಭ್ಯ ಕೊಡುವ ವ್ಯವಸ್ಥೆ ಮಾಡಲಿಕ್ಕೆ ತಾವು ಪ್ರಯತ್ನ ಮಾಡಿ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ಸಾರಿ ಈ ದೇವಸ್ಥಾನಕ್ಕೆ ಹೋಗತಕ್ಕ ಅವಕಾಶ ಸಿಕ್ಕಿತ್ತು. ನಾನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷನಾಗಿದ್ದೆ. ಹುಬ್ಬಳ್ಳಿಗೆ ನೀರು ಸರಬರಾಜು ಆಗುವ ಹೆಡ್‌ವರ್ಕ್ಸ್ ಇಲ್ಲೇ ಇದೆ.